ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 14–10–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಸಂಸ್ಥಾಪನಾ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ<br>ಉದ್ಘಾಟನೆ:<br>ಶ್ರೀ ಕೃಷ್ಣ ಭೈರೇಗೌಡ,<br>ಕೃಷಿ ಸಚಿವರು<br>ವಿ.ಸೂ.:<br>ಮಾಧ್ಯಮ ಪ್ರತಿನಿಧಿಗಳಿಗೆ ಪ್ರೆಸ್‌ಕ್ಲಬ್ ಆವರಣದಿಂದ ವಾಹನ ವ್ಯವಸ್ಥೆ ಮಾಡಲಾಗಿದ್ದು ವಾಹನವು ಬೆಳಿಗ್ಗೆ 9–50 ಗಂಟೆಗೆ ಹೊರಡಲಿದೆ<br>ಸಂಪರ್ಕ: ಡಾ: ಎಲ್. ರಾಮಕೃಷ್ಣರಾವ್, 9986663132 | 15–10–2014<br>ಬುಧವಾರ<br>ಬೆಳಿಗ್ಗೆ<br>10–30 ಗಂಟೆಗೆ | ಕುವೆಂಪು ಸಭಾಂಗಣ,<br>ಗಾಂಧಿ ಕೃಷಿ ವಿಜ್ಞಾನ ಕೇಂದ್ರ,<br>(ಜಿ.ಕೆ.ವಿ.ಕೆ)<br>ಬೆಂಗಳೂರು |
| 2. | ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಸಾಮಾನ್ಯ ಸಭೆ :<br>ಅಧ್ಯಕ್ಷತೆ:<br>ಶ್ರೀ ಕೆ.ಸಿ. ರಾಮಚಂದ್ರ,<br>ಜಿಲ್ಲಾ ಪಂಚಾಯಿತಿ ಅಧ್ಯಕ್ಷರು | 15-10-2014<br>ಬುಧವಾರ<br>ಬೆಳಿಗ್ಗೆ<br>11–30 ಗಂಟೆಗೆ | ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಸಭಾಂಗಣ,<br>ಬೆಂಗಳೂರು. |
| 3 | ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ ನಿರ್ಮಿಸಲು ಉದ್ದೇಶಿಸಿರುವ ವಿವಿಧ ಕಟ್ಟಡ ಕಾಮಗಾರಿಗಳ ಶಂಕುಸ್ಥಾಪನಾ ಸಮಾರಂಭ:<br>ಶಿಲಾನ್ಯಾಸ:<br>ಶ್ರೀ ಸಿದ್ದರಾಮಯ್ಯ, | 15–10–2014<br>ಬುಧವಾರ<br>ಮಧ್ಯಾಹ್ನ<br>12–30 ಗಂಟೆಗೆ | ಕುಮಾರಕೃಪ ಅತಿಥಿಗೃಹ ಆವರಣ,<br>ಕುಮಾರ ಕೃಪ ರಸ್ತೆ,<br>ಬೆಂಗಳೂರು –560 001 |

| | | | |
|---|---|---|---|
| | ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ<br>ವಿಶೇಷ ಆಹ್ವಾನಿತರು,<br>ಶ್ರೀ ಅನಂತಕುಮಾರ್,<br>ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು<br>ಶ್ರೀ ಡಿ. ಹೆಚ್. ಶಂಕರಮೂರ್ತಿ,<br>ಸಭಾಪತಿಗಳು,<br>ಕರ್ನಾಟಕ ವಿಧಾನ ಪರಿಷತ್ತು,<br>ಶ್ರೀ ಕಾಗೋಡು ತಿಮ್ಮಪ್ಪ,<br>ಸಭಾಧ್ಯಕ್ಷರು,<br>ಕರ್ನಾಟಕ ವಿಧಾನ ಸಭೆ<br>ಅಧ್ಯಕ್ಷತೆ:<br>ಶ್ರೀ ಆರ್. ರೋಷನ್‌ಬೇಗ್,<br>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ಹಜ್ ಸಚಿವರು<br>ಮುಖ್ಯ ಅತಿಥಿಗಳು:<br>ಡಾ: ಹೆಚ್.ಸಿ. ಮಹದೇವಪ್ಪ,<br>ಲೋಕೋಪಯೋಗಿ ಸಚಿವರು<br>ಅತಿಥಿಗಳು:<br>ಶ್ರೀ ಟಿ.ಬಿ. ಜಯಚಂದ್ರ,<br>ಕಾನೂನು, ಸಂಸದೀಯ ವ್ಯವಹಾರ ಮತ್ತು ಪಶುಸಂಗೋಪನೆ ಸಚಿವರು<br>ಶ್ರೀ ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು<br>ಶ್ರೀ ಕೆ.ಜೆ. ಜಾರ್ಜ್,<br>ಗೃಹ ಸಚಿವರು | | |
| **4** | **ಸಮಾಜ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರಿಂದ ಪತ್ರಿಕಾಗೋಷ್ಠಿ.** | **15-10-2014<br>ಬುಧವಾರ<br>ಮಧ್ಯಾಹ್ನ<br>1-00 ಗಂಟೆಗೆ** | **ಡಾ. ಬಿ.ಆರ್. ಅಂಬೇಡ್ಕರ್ ಭವನ,<br>ವಸಂತನಗರ,<br>ಬೆಂಗಳೂರು** |

**ನಿರ್ದೇಶಕರ ಪರವಾಗಿ**

# ಪತ್ರಿಕಾ ಪ್ರಕಟಣೆ

## ಪ್ರಾಜೆಕ್ಟ್ ಫೆಲೋಗಾಗಿ ಅರ್ಜಿ ಆಹ್ವಾನ

**ಬೆಂಗಳೂರು, ಅಕ್ಟೋಬರ್ 14 (ಕರ್ನಾಟಕ ವಾರ್ತೆ)**

ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಡಿಎಸ್‌ಟಿ ಪ್ರಾಯೋಜಿತ 3 ವರ್ಷಗಳ ಸಂಶೋಧನಾ ಕಾರ್ಯಕ್ರಮದಡಿ ಪ್ರಾಜೆಕ್ಟ್ ಫೆಲೋಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಎಂ.ಎಸ್ಸಿ. (ಕೆಮಿಸ್ಟ್ರಿ/ಇಡಸ್ಟ್ರಿಯಲ್/ಆರ್ಗ್ಯಾನಿಕ್/ಇನಾರ್ಗ್ಯಾನಿಕ್/ಫಿಸಿಕಲ್ ಅನಲಿಟಿಕಲ್ ಕೆಮಿಸ್ಟ್ರಿ) ಯಲ್ಲಿ ಕನಿಷ್ಠ 60 % ಹೊಂದಿರಬೇಕು. ಅಭ್ಯರ್ಥಿಗಳು ಸ್ವವಿವರದೊಂದಿಗೆ ಭರ್ತಿಮಾಡಿದ ಅರ್ಜಿಯನ್ನು ಅಟೆಸ್ಟ್ ಮಾಡಿದ ಅಂಕಪಟ್ಟಿಯೊಂದಿಗೆ ಪ್ರಿನ್ಸಿಪಾಲ್ ಇನ್ಸ್‌ಸ್ಟಿಗೇಟರ್ ಇವರಿಗೆ ಅಕ್ಟೋಬರ್ 23 ರ ಒಳಗಾಗಿ ಖುದ್ದಾಗಿ ಅಥವಾ ಅಂಚೆಯ ಮೂಲಕ ತಲುಪಿಲಸು ಸೂಚಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗೆ ತಿಂಗಳಿಗೆ ರೂ 14000/-. + 30% HRA ನೀಡಲಾಗುವುದು. ಸಂದರ್ಶನದ ಸಮಯದಲ್ಲಿ ಎಲ್ಲಾ ಮೂಲಕ ಅಂಕಪಟ್ಟಿಗಳನ್ನು ಹಾಗೂ ದಾಖಲಾತಿಗಳನ್ನು ಹಾಜರುಪಡಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಪ್ರಿನ್ಸಿಪಾಲ್ ಇನ್ವೆಸ್ಟಿಗೇಟರ್ ಶ್ರೀ ಶಿವರಾಜ್ ಇವರನ್ನು ಮೊಬೈಲ್ ಸಂಖ್ಯೆ 9972001267 ಅಥವಾ ಇ-ಮೇಲ್ shivaraj_y@rediffmail.com ಸಂಪರ್ಕಿಸಬಹುದಾಗಿದೆ.

ಕವನ:ಜಿಪಿಆರ್

## ಲೋಕೋಪಯೋಗಿ ಇಲಾಖೆವತಿಯಿಂದ 20095.00 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಕಟ್ಟಡ ಕಾಮಗಾರಿಗಳ ಶಂಕುಸ್ಥಾಪನೆ

**ಬೆಂಗಳೂರು, ಅಕ್ಟೋಬರ್ 14 (ಕರ್ನಾಟಕ ವಾರ್ತೆ)**

**ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ 20095.00 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಕಟ್ಟಡ ಕಾಮಗಾರಿಗಳನ್ನು ನಿರ್ಮಿಸಲು ಅಕ್ಟೋಬರ್ 15 ರಂದು ಮಧ್ಯಾಹ್ನ 12-30 ಕ್ಕೆ ಕುಮಾರಕೃಪ ಅತಿಥಿಗೃಹ ಆವರಣದಲ್ಲಿ ಶಂಕುಸ್ಥಾಪನೆ ನೆರವೇರಲಿದೆ. ಶಂಕುಸ್ಥಾಪನೆಗೊಳ್ಳಲಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.**

**ಶಾಸಕರುಗಳಿಗೆ ಸಾಂಸಾರಿಕ ಕೊಠಡಿ:**

ಬೆಂಗಳೂರು ಶಾಸಕರ ಭವನ ಆವರಣದಲ್ಲಿನ ಬಹುಮಹಡಿ ವಾಹನ ನಿಲ್ದಾಣದ ಕಟ್ಟಡ ಮೇಲೆ 1 ನೇ ಮಹಡಿಯಿಂದ 5 ನೆ ಮಹಡಿವರೆಗೆ ಪ್ರತಿ ಮಹಡಿಯಲ್ಲಿ ತಲಾ 10 ಸಾಂಸಾರಿಕ ಕೊಠಡಿಗಳನ್ನು 3500.00 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುವುದು.

ನೂತನ ವಸತಿ ಗೃಹ ನಿರ್ಮಾಣ:

1150.00 ಲಕ್ಷ ರೂ. ವೆಚ್ಚದಲ್ಲಿ ವಸಂತನಗರದಲ್ಲಿ ಇರುವ ಹಳೆಯದಾದ ವಸತಿ ಗೃಹಗಳನ್ನು ತೆರವುಗೊಳಿಸಿ ಗ್ರೂಪ್ ಎ ಮತ್ತು ಬಿ ದರ್ಜೆಯ ಅಧಿಕಾರಿಗಳಿಗೆ ಬಹುಮಹಡಿಯ ವಸತಿ ಸಂಕೀರ್ಣ ಹಾಗೂ 1800.00 ಲಕ್ಷ ರೂ. ವೆಚ್ಚದಲ್ಲಿ ಕ್ರೆಸೆಂಟ್ ರಸ್ತೆಯಲ್ಲಿರುವ ಶಿಥಿಲಾವ್ಯವಸ್ಥೆಯಲ್ಲಿರುವ ವಸತಿಗೃಹಗಳನ್ನು ಕೆಡವಿ ಗ್ರೂಪ್ ಸಿ ಮತ್ತು ಡಿ ನೌಕರರಿಗೆ ವಸತಿಗೃಹ ನಿರ್ಮಾಣ ಮಾಡಲಾಗುವುದು.

ಕುಮಾರಕೃಪ ಅತಿಥಿಗೃಹಕ್ಕೆ ಹೆಚ್ಚುವರಿ ಕೊಠಡಿ:

ಕುಮಾರಕೃಪ ಅತಿಥಿಗೃಹ ಆವರಣದಲ್ಲಿ 8000.00 ಲಕ್ಷ ರೂ. ವೆಚ್ಚದಲ್ಲಿ ಹೊಸ ಅತಿಥಿಗೃಹ ನಿರ್ಮಾಣ ಮಾಡಲು ಶಂಕುಸ್ಥಾಪನೆ.

ಇಲಾಖಾ ಕಛೇರಿ ನವೀಕರಣ:

ಬಹುಮಹಡಿ ಕಟ್ಟಡದಲ್ಲಿರುವ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕಚೇರಿಯನ್ನು 800.00 ಲಕ್ಷ ರೂ. ವೆಚ್ಚದಲ್ಲಿ ಹಾಗೂ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಕಚೇರಿಯನ್ನು 450.00 ಲಕ್ಷ ರೂ. ವೆಚ್ಚದಲ್ಲಿ ಕಾರ್ಪೋರೇಟ್ ಮಾದರಿಯಲ್ಲಿ ಆಧುನೀಕರಣಗೊಳಿಸಲಾಗುವುದು.

ಕಾವೇರಿ ಅತಿಥಿಗೃಹ ಆಧುನೀಕರಣ ಮತ್ತು ಪೂರಕ ಅತಿಥಿಗೃಹ ನಿರ್ಮಾಣ:

ಅರಮನೆ ರಸ್ತೆಯಲ್ಲಿರುವ ಕಾವೇರಿ ಅತಿಥಿಗೃಹವನ್ನು 495.00 ಲಕ್ಷ ರೂ. ವೆಚ್ಚದಲ್ಲಿ ಆಧುನೀಕರಣಗೊಳಿಸುವ ಜೊತೆಗೆ ಆ ಅತಿಥಿಗೃಹದ ಹಿಂಭಾಗದಲ್ಲಿರುವ ಜಾಗದಲ್ಲಿ 1800.00 ಲಕ್ಷ ರೂ. ವೆಚ್ಚದಲ್ಲಿ ಪೂರಕ ಅತಿಥಿಗೃಹ ನಿರ್ಮಿಸಲಾಗುವುದು.

ಕಾರ್‌ಪಾರ್ಕಿಂಗ್ ಮತ್ತು ಕಛೇರಿ ಕಟ್ಟಡ:

ಕೆ.ಆರ್. ವೃತ್ತದಲ್ಲಿರುವ ಲೋಕೋಪಯೋಗಿ ಇಲಾಖೆಯ ಅಭಿಯಂತರವರ ಕಛೇರಿ ಹಾಗೂ ಲೋಕೋಪಯೋಗಿ ಇಲಾಖೆಯ ಪೂರಕ ಕಟ್ಟಡಗಳ ವಿಸ್ತರಣಾ ಕಾಮಗಾರಿ ಮತ್ತು ಭೂ ದಾಖಲೆಗಳ ಇಲಾಖೆಯ ಆವರಣದಲ್ಲಿ 1400.00 ಲಕ್ಷ ರೂ. ವೆಚ್ಚದಲ್ಲಿ ಕಾರ್‌ಪಾರ್ಕಿಂಗ್ ಮತ್ತು ಕಛೇರಿ ಕಟ್ಟಡವನ್ನು ಹಾಗೂ ಕೋರಮಂಗಲದಲ್ಲಿರುವ ಲೋಕೋಪಯೋಗಿ ಇಲಾಖೆ ಜಾಗದಲ್ಲಿ 700.00 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಸಿ ಮಾದರಿ ವಸತಿಗಳ ಸಿಲ್ಟ್ ನೆಲ ಮತ್ತು ಮೊದಲ ಮಹಡಿಯ ಮೇಲೆ 5 ಅಂತಸ್ತುಗಳ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಗುವುದು.

**ಈ ಎಲ್ಲಾ ಕಾಮಗಾರಿಗಳಿಗೆ ನೀಲನಕ್ಷೆ ತಯಾರಾಗಿದ್ದು ಆಡಳಿತಾತ್ಮಕ ಅನುಮೋದನೆ ದೊರಕಿದೆಯಲ್ಲದೆ ಎಲ್ಲಾ ಕಾಮಗಾರಿಗಳಿಗೆ ನಿರ್ಮಾಣಕ್ಕೆ ಕಾಲಮಿತಿಯನ್ನು ಸಹ ನಿಗದಿಪಡಿಸುವ ಮೂಲಕ ಶೀಘ್ರದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಲೋಕೋಪಯೋಗಿ ಇಲಾಖೆಯು ಕ್ರಮ ಕೈಗೊಂಡಿದೆ.**

**ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಅಕ್ಟೋಬರ್ 15ರಂದು ಕುಮಾರಕೃಪ ಅತಿಥಿಗೃಹ ಆವರಣದಲ್ಲಿ ಈ ಎಲ್ಲ ಕಾಮಗಾರಿಗಳ ಶಿಲಾನ್ಯಾಸ ನೆರವೇರಿಸುವರು. ಸಮಾರಂಭದಲ್ಲಿ ವಿಶೇಷ ಆಹ್ವಾನಿತರಾಗಿ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಶ್ರೀ ಅನಂತಕುಮಾರ್, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಡಿ.ಹೆಚ್. ಶಂಕರಮೂರ್ತಿ, ಕರ್ನಾಟಕ ವಿಧಾನ ಸಭೆ ಸಭಾಧ್ಯಕ್ಷ ಶ್ರೀ ಕಾಗೋಡು ತಿಮ್ಮಪ್ಪ ಅವರುಗಳು ಭಾಗವಹಿಸುವರು. ಸಮಾರಂಭದ ಅಧ್ಯಕ್ಷತೆಯನ್ನು ವಾರ್ತಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ವಹಿಸುವರು. ಮುಖ್ಯ ಅತಿಥಿಗಳಾಗಿ ಲೋಕೋಪಯೋಗಿ ಸಚಿವ ಡಾ: ಹೆಚ್.ಸಿ. ಮಹದೇವಪ್ಪ, ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ಪಶು ಸಂಗೋಪನಾ ಸಚಿವ ಶ್ರೀ ಟಿ.ಬಿ. ಜಯಚಂದ್ರ, ಸಾರಿಗೆ ಸಚಿವ ಶ್ರೀ ರಾಮಲಿಂಗಾರೆಡ್ಡಿ, ಗೃಹ ಸಚಿವ ಶ್ರೀ ಕೆ.ಜೆ. ಜಾರ್ಜ್ ಹಾಗೂ ಇತರರು ಭಾಗವಹಿಸುವರು.**

## <u>ಸಚಿವ ಸಂಪುಟ ಸಭೆ</u>

**ಬೆಂಗಳೂರು, ಅಕ್ಟೋಬರ್ 14 (ಕರ್ನಾಟಕ ವಾರ್ತೆ)**

**ಸಚಿವ ಸಂಪುಟದ 2014 ನೇ ಸಾಲಿನ 20 ನೇ ಸಭೆಯು ಅಕ್ಟೋಬರ್ 16 ರಂದು ಅಪರಾಹ್ನ 12.00 ಗಂಟೆಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಮಂದಿರದಲ್ಲಿ ನಡೆಯಲಿದೆ ಎಂದು ಸಚಿವ ಸಂಪುಟದ ಅಧಿಕೃತ ಪ್ರಕಟಣೆ ತಿಳಿಸಿದೆ.**

## Applications are invited for project fellow position

Bangalore, October 14 (Karnataka Information):

Applications are invited for project fellow position for a period of 03 years in the DST sponsored Research Project. Candidates with a minimum of 60% marks in M.Sc., (Chemistry/industrial /Organic/Inorganic/Analytical/Physical Chemistry) can send application to Dr. Shivaraj Y (Principal Investigator)

Assistant Professor, Department of Chemistry, Government Science College, Nrupatunga Road, Bangalore -560 001.

Candidates possessing the requisite qualification may submit their application and curriculum vitae to the Principal Investigator, by post or personally on or before 23-10-2014. Attested copies of the relevant certifictes and marks cards (from SSLC onwards) to be enclosed. The selected candidates will be paid a consolidated salary of Rs. 14,000/- + 30% HRA per month.

For further details if any, candidates can contact the Principal Investigator through his mobile no. 9972001267 or e-mail : Shivaraj_y@rediffmail.com.

## ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿ/ಸಿಬ್ಬಂದಿ.ಶಾ./ಕೇ.ಮಾ.ಸಂ.ಅ.ಪ.ವಿ.ವೇ.2014/2012-13

ನಿರ್ದೇಶಕರು ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಕ್ರಾಸ್, ಸಂಪಿಗೆ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-12.
ದಿನಾಂಕ: 09-10-2014.

## ಪತ್ರಿಕಾ ಪ್ರಕಟಣೆ

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ, ಉನ್ನತ ಶಿಕ್ಷಣ ಇಲಾಖೆ, ನವದೆಹಲಿ ಇವರ "Central Sector Scheme Scholarship For Colleges and University Students"ಗೆ ದ್ವಿತೀಯ ಪಿಯುಸಿ 2014ರ ಪರೀಕ್ಷೆಯಲ್ಲಿ ವಿವಿಧ ಕ್ಯಾಟಗರಿ, ಸಂಯೋಜನೆ ಮತ್ತು ಲಿಂಗವಾರು ಒಟ್ಟು 600 ಅಂಕಗಳಿಗೆ ನಿಗಧಿಪಡಿಸಿರುವ cutoff ಅಂಕಗಳನ್ನು ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಹಾಕಲು ಅರ್ಹರಾಗಿರುತ್ತಾರೆ.

**600 ಅಂಕಗಳಿಗೆ ನಿಗಧಿಪಡಿಸಿರುವ (Cut off marks) ಅಂಕಗಳು:**
**(Cutoff marks fixed for Submission of Application only)**

| Category | Science | | Commerce | | Arts | |
|---|---|---|---|---|---|---|
| | Boys | Girls | Boys | Girls | Boys | Girls |
| GM | 556 | 557 | 530 | 551 | 506 | 517 |
| OBC | 554 | 555 | 529 | 549 | 505 | 516 |
| SC | 484 | 479 | 489 | 503 | 495 | 491 |
| ST | 471 | 458 | 473 | 490 | 494 | 491 |

ಈ ಮೇಲಿನಂತೆ ಅಂಕಗಳನ್ನು ಪಡೆದಿರುವ ಅರ್ಹ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ತಾವು ಅಧ್ಯಯನ ಮಾಡುತ್ತಿರುವ ಕಾಲೇಜುಗಳ ಪ್ರಾಚಾರ್ಯರುಗಳಿಗೆ ತುಂಬಿದ ಅರ್ಜಿಗಳನ್ನು ಸಲ್ಲಿಸಲು **ದಿನಾಂಕ:07-10-2014** ಕೊನೆಯ ದಿನಾಂಕವೆಂದು ಮತ್ತು ಪ್ರಾಂಶುಪಾಲರುಗಳು ತಮ್ಮ ಕಾಲೇಜಿಗೆ ಬಂದಿರುವ ಅರ್ಜಿಗಳನ್ನು ಇಲಾಖೆಗೆ ಸಲ್ಲಿಸಲು **ದಿನಾಂಕ: 10-10-2014** ಕೊನೆಯ ದಿನಾಂಕವೆಂದು ನಿಗದಿಪಡಿಸಲಾಗಿತ್ತು, ಅನೇಕ ಅರ್ಹ ವಿದ್ಯಾರ್ಥಿಗಳು ಪ್ರಚಾರದ ಕೊರತೆಯಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೆ ಇರುವುದು ಕಂಡು ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಅಗತ್ಯ ಸಂಖ್ಯೆಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಅರ್ಹ ವಿದ್ಯಾರ್ಥಿಗಳು ಕಾಲೇಜಿನ ಪ್ರಾಂಶುಪಾಲರುಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು **ದಿನಾಂಕ: 25-10-2014ರವರೆಗೆ** ವಿಸ್ತರಿಸಲಾಗಿದೆ. ಹಾಗೂ ಕಾಲೇಜಿನ ಪ್ರಾಂಶುಪಾಲರುಗಳು ಇಲಾಖೆಗೆ ಕ್ರೋಢೀಕೃತ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವನ್ನು **ದಿನಾಂಕ:27-10-2014ರವರೆಗೆ** ವಿಸ್ತರಿಸಲಾಗಿದೆ. ಈ ಸಂಬಂಧ ಹೆಚ್ಚಿನ ಮಾಹಿತಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ **Website no.:http://pue.kar.nic.in =» Scholarship =» MHRD Scholarship =» MHRD Scholarship 2014-Fresh batch**ನಿಂದ ಅರ್ಜಿಯನ್ನು / ಮಾಹಿತಿಯನ್ನು ಪಡೆದುಕೊಳ್ಳಬಹುದು.

Padbole
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.